Reg. No. [ | | | | | | | | ]

# BASKAC 282

**Choice Based Credit System Fourth Semester B.A. Examination, September 2022**
**(2021 – 22 Batch Onwards)**
**KANNADA OPTIONAL (Paper – IV)**
**ಕೀರ್ತನೆ, ಸಾಂಗತ್ಯ, ಯಕ್ಷಗಾನ, ಕಾವ್ಯ, ಸಾಹಿತ್ಯ ಚರಿತ್ರೆ ಮತ್ತು ಛಂದಸ್ಸು**

Time : 3 Hours Max. Marks : 120

I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : **(3×15=45)**

1) 'ಅಮ್ಮ ನೀ ಕರೆತಾರೆ' ಕೀರ್ತನೆಯಲ್ಲಿನ ದಶಾವತಾರ ವರ್ಣನೆಯನ್ನು ವಿವರಿಸಿ.

**ಅಥವಾ**

ಸರ್ವಜ್ಞನ ವಚನಗಳಲ್ಲಿ ವ್ಯಕ್ತವಾಗುವ ದಾನದ ಸ್ವರೂಪ ಮತ್ತು ಮಹತ್ವವನ್ನು ವಿವರಿಸಿ.

2) ಕುಮಾರರಾಮನ ಶೌರ್ಯ, ಸಾಹಸ ವ್ಯಕ್ತಿತ್ವವನ್ನು ವಿವರಿಸಿ.

**ಅಥವಾ**

ಹರಿಶ್ಚಂದ್ರನು ರಾಜ್ಯವನ್ನು ತ್ಯಜಿಸಿ ವನಕ್ಕೆ ಹೊರಡುವ ಸಂದರ್ಭವನ್ನು ವಿವರಿಸಿ.

3) ಸಾಂಗತ್ಯ ಎಂದರೇನು ? ಸಾಂಗತ್ಯ ಸಾಹಿತ್ಯ ಚರಿತ್ರೆಯನ್ನು ವಿವರಿಸಿ.

**ಅಥವಾ**

ತತ್ವ ಪದಗಳ ಹಿನ್ನೆಲೆ, ಸ್ವರೂಪ ಮತ್ತು ಕನ್ನಡದ ಮುಖ್ಯ ತತ್ವ ಪದಕಾರರ ಬಗ್ಗೆ ವಿವರಿಸಿ.

II. ಅ) **ಒಂದು** ಪ್ರಶ್ನೆಗೆ ಉತ್ತರಿಸಿ : **(1×10=10)**

1) ಮಾತ್ರಾ ಷಟ್ಪದಿಗಳನ್ನು ಪರಿಚಯಿಸಿ ಮತ್ತು ಭೋಗ, ಭಾಮಿನಿ ಷಟ್ಪದಿಗಳ ಲಕ್ಷಣಗಳನ್ನು ಉದಾಹರಣೆಗಳೊಂದಿಗೆ ವಿವರಿಸಿ.

2) ಸಾಂಗತ್ಯದ ಸಾಮಾನ್ಯ ಲಕ್ಷಣ ಮತ್ತು ನಡುಗನ್ನಡ, ಹೊಸಗನ್ನಡ ಸಾಂಗತ್ಯ ಸ್ವರೂಪವನ್ನು ವಿವರಿಸಿ.

ಆ) **ಒಂದು** ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಣೆ ಮಾಡಿ, ಛಂದಸ್ಸು ಹೆಸರಿಸಿ : **(1×5=5)**

1) ಇಂತಾ ಮುರಹರನೆಂದುದ ಕೇಳುತ
ಚಿಂತಾತುರದಿಂದಾವಸುದೇವಂ

2) ಸರದಾರ ಬರುವಾಗ ಸುರಿದಾವ ಮಲ್ಲಿಗೆ
ದೊರೆ ನನ್ನ ತಮ್ಮ ಬರುವಾಗ . . .

P.T.O.

III. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : **(3×8=24)**

1) 'ಆವಕುಲವೊರಂಗ' ಕೀರ್ತನೆಯ ಆಶಯವನ್ನು ವಿವರಿಸಿ.

**ಅಥವಾ**

'ಬಯಲು ಭ್ರಾಂತು' ತತ್ವ ಪದದಲ್ಲಿನ ಡಾಂಬಿಕತೆಯ ನಿರೂಪಣೆಯನ್ನು ವಿವರಿಸಿ.

2) 'ಕನ್ನಡದ ಕಡುಗಲಿ' ಕಾವ್ಯ ಭಾಗದ ಯುದ್ಧ ಮತ್ತು ದುರಂತ ವರ್ಣನೆಯನ್ನು ವಿವರಿಸಿ.

**ಅಥವಾ**

ಸಂಧಾನಕ್ಕೆ ಬಂದ ಕೃಷ್ಣ ಸಂಗ್ರಾಮವನ್ನು ನಿಶ್ಚಯಿಸಿದ ಬಗೆಯನ್ನು ವಿವರಿಸಿ.

3) ಚಿತ್ರ ಮತ್ತು ವಿಚಿತ್ರ ತ್ರಿಪದಿಯ ಛಂದೋಲಕ್ಷಣಗಳನ್ನು ಉದಾಹರಣೆಯೊಂದಿಗೆ ವಿವರಿಸಿ.

**ಅಥವಾ**

ಮೂಲ-ಅಂಶ ಷಟ್ಪದಿಯ ಲಕ್ಷಣಗಳನ್ನು ವಿವರಿಸಿ.

IV. ಅ) **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2×4=8)**

1) ಕನಕದಾಸರು
2) ಹರಪನ ಹಳ್ಳಿ ಭೀಮವ್ವ
3) ಮುಪ್ಪಿನ ಷಡಕ್ಷರಿ
4) ಸರ್ವಜ್ಞ.

ಆ) **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2×4=8)**

1) ಹರಿಶ್ಚಂದ್ರ ಸಾಂಗತ್ಯ
2) ದೇವಿದಾಸ
3) ಕಾಟಣ್ಣ
4) ವಿದುರ.

ಇ) **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2×4=8)**

1) ಭಕ್ತಿ ಸಾಹಿತ್ಯಕ್ಕೆ ಪುರಂದರದಾಸರ ಕೊಡುಗೆ
2) ಪಾರ್ತಿ ಸುಬ್ಬ
3) ಕನ್ನಡ ಶತಕ ಸಾಹಿತ್ಯ
4) ಗ್ರಂಥ ಸಾಹಿತ್ಯದಲ್ಲಿ ತ್ರಿಪದಿ.

V. **ಎಲ್ಲಾ** ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ : **(12×1=12)**

1) ವಾದಿರಾಜರ ಕೀರ್ತನೆಗಳ ಅಂಕಿತ ಯಾವುದು ?

2) 'ಪರಮಾರ್ಥ' ಯಾರ ಅಂಕಿತವೆಂದು ಡಾ. ಎಲ್. ಬಸವರಾಜು ಹೇಳುತ್ತಾರೆ ?

3) ಕನಕದಾಸರ ಆರಾಧ್ಯ ದೇವರು ಯಾರು ?

4) 'ಮಾತಂಗಿ' ಯಾರು ?

5) 'ಕೃಷ್ಣ ಸಂಧಾನ' ಪ್ರಸಂಗದ ಕುರಿತು ಪಿ.ಹೆಚ್.ಡಿ. ಪದವಿ ಪಡೆದ ವಿದ್ವಾಂಸ ಯಾರು ?

6) ಯಕ್ಷಗಾನದ ಎರಡು ತಿಟ್ಟುಗಳು ಯಾವುವು ?

7) ಅಕ್ಕ ಮಹಾದೇವಿ ರಚಿಸಿದ ತ್ರಿಪದಿಯ ಕೃತಿ ಯಾವುದು ?

8) ಸೋಮನಾಥನ ಶತಕಗಳ ಅಂಕಿತ ಯಾವುದು ?

9) ವಿಚಿತ್ರ ತ್ರಿಪದಿಯ ಕೊನೆಯಲ್ಲಿ ಯಾವ ಗಣ ಬರಬೇಕು ?

10) 'ಛಂದಸ್ಸಾರ' ಯಾರ ಕೃತಿ ?

11) ಹರಿಶ್ಚಂದ್ರ ಕಾವ್ಯ ಯಾವ ಷಟ್ಪದಿಯಲ್ಲಿದೆ ?

12) ಸಾಂಗತ್ಯ ಛಂದಸ್ಸಿನಲ್ಲಿ ಎಷ್ಟು ಸಾಲುಗಳಿರುತ್ತವೆ ?

---